

ಹಾಗೆಯೇ ಆತನೂ ಇರಬಹುದಲ್ಲವೆ? ಮುಂದೆ ತಾನು ಏನಾಗುತ್ತೇನೆ ಎಂಬ ಗ್ಯಾರಂಟಿ ಆತನಿಗೂ ಇರಲಿಕ್ಕಿಲ್ಲ. ಆದರೆ ಆತನೂ 'ತಿರುಕನ ಕನಸು' ಕತೆ ಕೇಳಿರುವ ಸಾಧ್ಯತೆ ಇದೆ. ಕೇಳದಿದ್ದರೂ ತನಗೂ ಯಾವುದೋ 'ಆನೆ ಬಂದು ಹಾರ ಹಾಕಬಹುದು' ಎಂಬ ಅನಿರೀಕ್ಷಿತವಾದ ಆದರೆ ಅದ್ಭುತವಾದ ಘಟನೆಯ ನಿರೀಕ್ಷೆಯಲ್ಲಿ ಬದುಕುತ್ತಿರಲು ಸಾಧ್ಯ. ಅಲ್ಲವೆ?'

ವೀಣಾಳ ಚುಚ್ಚುನುಡಿ ನನಗೆ ಅರ್ಥವಾಗದೆ ಇರಲಿಲ್ಲ: ಆತ ಏಕೆ ಬದುಕಬೇಕು ಎಂಬ ನನ್ನ ಪ್ರಶ್ನೆಯಲ್ಲಿ ಹುದುಗಿದ್ದ ಅಮಾನವೀಯ ದೃಷ್ಟಿಕೋನವನ್ನು ತೆರೆದಿಡಲು ಪ್ರಯತ್ನಿಸಿದ್ದಳು. ನನ್ನ ಮಾತಿನಲ್ಲಡಗಿದ್ದ 'ಬದುಕಲು ಆತನಿಗಿಂತ ನಾನು ಹೆಚ್ಚು ಯೋಗ್ಯ' ಎಂಬ ಹಮ್ಮಿನ, ಸ್ವಾರ್ಥ ಮನೋಭಾವವನ್ನು ಎತ್ತಿ ತೋರಿಸುತ್ತಿದ್ದಳು. ಅವಳ ಆ ನಿಷ್ಠುರತೆಗೆ ನನಗೆ ಬೇಸರವಿರಲಿಲ್ಲ. ಬದಲಿಗೆ ನನ್ನಲ್ಲಿ ಮೂಡಿದ್ದ ಜಿಜ್ಞಾಸೆಯನ್ನು ಆಕೆಗೆ ತಿಳಿಹೇಳಲು ಸೋತಿದ್ದೇನೆ ಎಂದು ಮನದಟ್ಟಾಗಿ ನನ್ನ ವಾದವನ್ನು ತಿಳಿಯಾಗಿಸಲು ಪ್ರಯತ್ನಿಸಿದೆ.

## ಬದುಕುವ ಛಲವೇ ವಿಕಾಸದ ಇಂಧನ

'ಯಾರೇ ಆಗಲಿ, ಏಕೆ ಬದುಕಿರಬೇಕು ಎಂಬ ಪ್ರಶ್ನೆಯಲ್ಲಿನ ನೈತಿಕ ಸತ್ವದ ಬಗ್ಗೆಯೂ ನಾನು ಯೊಚಿಸುತ್ತಿಲ್ಲ ವೀಣಾ. ನನ್ನ ಪ್ರಶ್ನೆಯ ಮತ್ತೊಂದು ಮಗ್ಗುಲನ್ನು ಕಾಣಲು ಪ್ರಯತ್ನಿಸು.'

'ಯಾವ ಮಗ್ಗುಲು?'

'ನಾವೆಲ್ಲರೂ ಬದುಕಲು ಏಕೆ ಬಯಸುತ್ತೇವೆ? ಎಂತಹ ದುಃಸ್ಥಿತಿಯಲ್ಲೂ ಬದುಕಲು ಏಕೆ ಹೆಣಗುತ್ತೇವೆ? ಅಥವ ಮತ್ತೊಂದು ರೀತಿಯಲ್ಲಿ ಹೇಳಬೇಕೆಂದರೆ, ಎಂತಹುದೇ ಸಂಕಷ್ಟಗಳಿಂದಲೂ ಸುಲಭವಾಗಿ ಮುಕ್ತಿ ಕೊಡುವ, ಎಂತಹ ದುಃಖವನ್ನೇ ಆಗಲಿ, ಚಿಟಿಕೆ ಹಾಕಿದಂತೆ ನೀಗಿಸಬಲ್ಲ ಸಾವನ್ನು ಬಯಸದೆ, ಎಷ್ಟೇ ಕಷ್ಟ ಬಂದರೂ ಬದುಕಲು ಹಾತೊರೆಯುವ ಅಂತಃಚೇತನ ನಮ್ಮಲ್ಲಿ ಏಕೆ ಮತ್ತು ಹೇಗೆ ಬಂತು ಎನ್ನುವುದರ ಬಗ್ಗೆ ಹುಡುಕುವುದೇ ನನ್ನ ಪ್ರಶ್ನೆಯ ಉದ್ದೇಶ' ಎಂದೆ. ನನ್ನ ವಿವರಣೆ ಕೇಳಿ ಕೆಲವು ಕ್ಷಣಗಳ ಕಾಲ ಯೋಚಿಸುತ್ತ, ಮತ್ತೆ ಹೇಳಿದಳು.

'ಅಂದರೆ ಸಾಯುವುದಕ್ಕಿಂತ ಹೆಚ್ಚಾಗಿ ಬದುಕುವ ಇಚ್ಛೆ ನಮ್ಮಲ್ಲಿ ಏಕೆ ಅಂತರ್ಗತವಾಗಿದೆ ಎನ್ನುವುದು ನಿಮ್ಮ ಪ್ರಶ್ನೆಯ ಆಂತರ್ಯವೆ?' ಆಕೆಯ ಅವಲೋಕನಕ್ಕೆ ಒಪ್ಪಿ ತಲೆ ಆಡಿಸಿ,

'ಸ್ಪಷ್ಟವಾಗಿ' ಎಂದೆ. ವೀಣಾ ಸಣ್ಣಗೆ ನಗುತ್ತ ಹೇಳಿದಳು.

'ವಿಕಾಸವಾದವನ್ನು ಅಧ್ಯಯನ ಮಾಡುತ್ತಿರುವ ನಿಮಗೆ ಈ ವೈಶಿಷ್ಟ್ಯ ಏಕೆ ಆಶ್ಚರ್ಯವಾಗಿ ಕಾಣಬೇಕು ಎಂದು ಅರ್ಥವಾಗುತ್ತಿಲ್ಲ. ಎಲ್ಲ ಜೀವಿಗಳಲ್ಲಿಯೂ ಬದುಕುವ ಗುಣ, ಬದುಕಲೇಬೇಕು ಎಂಬ ಛಲ, ಹಾಗೂ ಎಂತಹುದೇ ಸಂಕಷ್ಟದ ಸ್ಥಿತಿಯಲ್ಲೂ ಬದುಕಲು ಹೆಣಗುವ ಗುಣ, ಅಂತರ್ಗತವಾಗಿರುವುದರಿಂದಲೇ ಅಲ್ಲವೆ